ಇ) ರಾಜ್ಯದಲ್ಲಿ ದಿನಾಂಕ : ೩೧-೩-೨೫ ರ ಅಂತ್ಯಕ್ಕೆ ೩,೨೧,೬೭೬ ಸಣ್ಣ ಪ್ರಮಾಣದ ಕೈಗಾರಿಕೆಗಳು ಇವೆ.

ಈ) ೩ನೇ ಅಖಿಲಭಾರತ ಸಣ್ಣ ಪ್ರಮಾಣ ಕೈಗಾರಿಕೆಗಳ ಗಣತಿಯ ವರದಿಯ ಪ್ರಕಾರ ರಾಜ್ಯದಲ್ಲಿ ೪೬,೬೧೧ ಘಟಕಗಳು ಮುಚ್ಚಿರುತ್ತವೆ.

ಉ) ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳಲ್ಲಿ ಕೈಗಾರಿಕೆಗಳು ಮುಚ್ಚಲು ಉದಾರೀಕರಣ, ಜಾಗತಿಕರಣ ನೀತಿ, ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ, ವಿಳಂಬ ಪಾವತಿ (ದೊಡ್ಡ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳು ಹಣ ಪಾವತಿ ಮಾಡುವಲ್ಲಿ); ವಿದ್ಯುತ್ ಸಮಸ್ಯೆ, ದುಡಿಮೆ ಬಂಡವಾಳದ ಸಮಸ್ಯೆ, ಮಾರುಕಟ್ಟೆ ಸ್ಪರ್ಧೆ ಮತ್ತು ಮಾಲೀಕರ ವಿವಾದಗಳು ಪ್ರಮುಖ ಕಾರಣಗಳಾಗಿರುತ್ತವೆ.

ಊ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ೧.೪.೧೯೯೩ ರಿಂದ ೩೧.೩.೨೦೦೫ರ ಅಂತ್ಯದವರೆಗಿನ ಅವಧಿಯಲ್ಲಿ ಓ.ಟಿ.ಎಸ್ ಯೋಜನೆಯಡಿಯಲ್ಲಿ ೧೯,೯೪೮ ಅರ್ಜಿಗಳನ್ನು ಸ್ವೀಕರಿಸಿದೆ. ಇದರಲ್ಲಿ ಸಂಸ್ಥೆಯು ೧೮,೯೬೪ ಘಟಕಗಳಿಗೆ ಓ.ಟಿ.ಎಸ್. ಸೌಲಭ್ಯ ಕಲ್ಪಿಸಿದೆ.

೩೮೯೮: (೪೫೮೧೧) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುತ್ತಿರುವ ವಸತಿ ನಿಲಯಗಳೆಷ್ಟು; ಹಾಗೂ ಅವು ಯಾವುವು;

ಆ) ಬೀದರ್ ಜಿಲ್ಲೆಯಲ್ಲಿ ಈ ನಿಟ್ಟಿನಲ್ಲಿ ಎಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿ, ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ ಹಾಗೂ ಎಲ್ಲೆಲ್ಲಿ ಆರಂಭಿಸಲಾಗುವುದು;

ಇ) ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು;

ಈ) ಈ ಎಲ್ಲಾ ಯೋಜನೆಗಳ ಅನುಷ್ಠಾನದ ಜವಾಬ್ದಾರಿಯನ್ನು ಯಾವ ಇಲಾಖೆಗೆ ವಹಿಸಲಾಗಿದೆ; ಯೋಜನೆಗಳ ವಿವರ ಒದಗಿಸುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಟ್ಟು ೧೪೩೬ ವಿದ್ಯಾರ್ಥಿನಿಲಯಗಳಿದ್ದು ವಿವರ ಕೆಳಕಂಡಂತಿದೆ.

ಮೆಟ್ರಿಕ್ ಪೂರ್ವ ವಸತಿ ನಿಲಯಗಳು			ಮೆಟ್ರಿಕ್ ನಂತರದ ವಸತಿ ನಿಲಯಗಳು		
ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
೮೫೦	೨೫೯	೧೧೫೪	೨೧೧	೭೧	೨೮೨

ಆ) ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಟ್ಟು ೫೪ ವಿದ್ಯಾರ್ಥಿನಿಲಯಗಳಿವೆ. ವಿವರ ಕೆಳಕಂಡಂತಿದೆ.

ಮೆಟ್ರಿಕ್ ಪೂರ್ವ ವಸತಿ ನಿಲಯಗಳು			ಮೆಟ್ರಿಕ್ ನಂತರದ ವಸತಿ ನಿಲಯಗಳು		
ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
೩೦	೦೮	೩೮	೧೨	೦೪	೧೬

ಅಲ್ಲದೆ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಬೀದರ್ ತಾಲ್ಲೂಕಿನ ಮನ್ನಳ್ಳಿ ಗ್ರಾಮಕ್ಕೆ ಹಾಗೂ ಬಸವ ಕಲ್ಯಾಣ ತಾಲ್ಲೂಕಿನ ಯರಂಡಿ ಗ್ರಾಮಕ್ಕೆ ಪ್ರಸ್ತಾವನೆಗಳು ಬಂದಿರುತ್ತವೆ.

ಇ) ಹಾಲಿ ಇರುವ ವಸತಿ ನಿಲಯಗಳ ನಿರ್ವಹಣೆಗಾಗಿ ೨೦೦೪-೦೫ ನೇ ಸಾಲಿಗೆ ಮೆಟ್ರಿಕ್ ನಂತರದ ವಸತಿ ನಿಲಯಗಳಿಗೆ ರೂ. ೩೪,೭೮೯ ಲಕ್ಷಗಳು ಹಾಗೂ ಮೆಟ್ರಿಕ್ ಪೂರ್ವ ವಸತಿ ನಿಲಯಗಳಿಗೆ ರೂ.೨೩೭.೧೪ ಲಕ್ಷಗಳು ಬಿಡುಗಡೆಯಾಗಿ ಖರ್ಚಾಗಿರುತ್ತದೆ.

ಈ) ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವ ಜವಾಬ್ದಾರಿ ಸಮಾಜ ಕಲ್ಯಾಣ ಇಲಾಖೆಯದ್ದಾಗಿರುತ್ತದೆ.

೩೮೯ (೪೫೯೫) **ಶ್ರೀ ರಾಜೇಂದ್ರ ವರ್ಮಾ (ಹುಲಸೂರು)** :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಗೆ ೨೦೦೩-೦೪ ಮತ್ತು ೨೦೦೪-೦೫ ನೇ ಸಾಲಿಗೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನರಿಗೆ ಮಂಜೂರಾಗಿರುವ ಕೊಳವೆ ಬಾವಿಗಳು ಎಷ್ಟು ; (ವಿಧಾನ ಸಭಾವಾರು ಮಾಹಿತಿ ನೀಡುವುದು);